(*a*) in view of Harapanahalli Taluk of Bellary District being very backward taluk in all respects, whether the Government intend to start any factory at Harapanahalli only taking into consideration of the steel factory started at Torangal ,

(*b*) in case they are not in a position to start any factory by themselves, whether they would assist the private parties to start the factory at Harapanahalli by giving them a licence ?

SRI S. M. KRISHNA, (Minister for Industries).—

(*a*) No.

(*b*) In case, private parties come forward it will be considered by the Government.

ಶ್ರೀ ಕೆ. ಬಿ. ಶಿವಯ್ಯ. ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸನ್ನು ಕಳುಹಿಸಿದ್ದೇನೆ. ಅದರ ಬಗ್ಗೆ ಸರ್ಕಾರದಿಂದ ಉತ್ತರ ಹೇಳಬೇಕು.

ಅಧ್ಯಕ್ಷರು:—ಸಂಬಂಧಪಟ್ಟ ಮಂತ್ರಿಗಳು ಇನ್ನೂ ಊರಿಗೆ ಬಂದಿಲ್ಲ. ಇನ್ನೂ ಮೈಸೂರಿನಲ್ಲಿದ್ದಾರೆ. ಎಲ್ಲಾ ವಿಷಯಗಳನ್ನು ಸಂಗ್ರಹ ಮಾಡಿಕೊಂಡು ಬರುತ್ತೇನೆಂದು ಹೇಳಿದ್ದಾರೆ. ಇವತ್ತು ಬಂದರೆ, ಇವತ್ತೇ ಅದನ್ನು ತೆಗೆದುಕೊಳ್ಳೋಣ. ಒಂದುವೇಳೆ ಇವತ್ತು ಸಾಧ್ಯವಾಗದಿದ್ದರೆ, ಅದನ್ನು ನಾಳೆ ಯಾದರೂ ತೆಗೆದುಕೊಳ್ಳೋಣ.

Fast unto death by Sri M. K. Surpur and Famine Condition in some parts of the State

ಶ್ರೀ ಜಿ. ಪಿ. ಸಂಜುಂಡಯ್ಯನಮಠ್ (ಗುಂಲೆದ್‌ಗುಡ). ಸಭೆಯ ಮಾನ್ಯ ಸದಸ್ಯರಾದ ಶ್ರೀ ಸುರಪುರ್ ಮಲ್ಲಪ್ಪನವರು ಅಮರಣಾಂತ ಉಪವಾಸವನ್ನು ಈಗಾಗಲೇ ಕೈಗೊಂಡಿದ್ದಾರೆ. ಇದು ಬಹಳ ಮಹತ್ವವಾದಂಥ ಪ್ರಶ್ನೆ, ಅವರ ಆರೋಗ್ಯದ ಬಗ್ಗೆ ಡಾಕ್ಟರ್ ಅವರ ವರದಿಯನ್ನು ನೋಡಿದರೆ ಅವರ ಆರೋಗ್ಯ ಅಷ್ಟು ಚೆನ್ನಾಗಿಲ್ಲ, ಅನ್‌ಸ್ಯಾಟಿಸ್‌ಫ್ಯಾಕ್ಟರಿ ಎಂಬುದಾಗಿ ವರದಿ ಮಾಡಿದ್ದಾರೆ. ಆದ್ದರಿಂದ ದಯಮಾಡಿ ಈ ವಿಚಾರದ ಬಗ್ಗೆ ಹೆಚ್ಚಿನ ಗಮನವನ್ನು ಕೊಡಬೇಕಾಗಿದೆ.

ಅಧ್ಯಕ್ಷರು:—ಈ ವಿಚಾರದಲ್ಲಿ ಕಾಲ್ ಅಟೆನ್‌ಷನ್ ನೋಟೀಸ್ ಕಳುಹಿಸಿದ್ದಾರೆ. ನಾನು ಅದನ್ನು ಸರ್ಕಾರಕ್ಕೆ ಕಳುಹಿಸಿದ್ದೇನೆ. ನನಗೆ ಇನ್ನೂ ಉತ್ತರ ಬಂದಿಲ್ಲ. ಅದನ್ನು ವಿಚಾರಿಸುತ್ತೇನೆ.

† ಶ್ರೀ ಕಾಗೋಡು:—ತಿಮ್ಮಪ್ಪ (ಸಾಗರ). ಮಾನ್ಯ ಅಧ್ಯಕ್ಷಣಿಯವರೇ, ಬಿಜಾಪುರ ಜಿಲ್ಲೆಯಲ್ಲಿ ಬರಗಾಲ ಪರಿಸ್ಥಿತಿಯನ್ನು ನಾವು ಈ ಸಭೆಯಲ್ಲಿ ಹಿಂದೆ ಸಾಕಷ್ಟು ತೀವ್ರವಾಗಿ ವಿವರಿಸಿದ್ದೇನೆ. ಈಗ ಆ ಕ್ಷೇತ್ರದ ಒಬ್ಬ ಶಾಸನ ಸಭಾಸದಸ್ಯರು ಉಪವಾಸ ಸತ್ಯಾಗ್ರಹ ಪ್ರಾರಂಭ ಮಾಡಿದ್ದಾರೆಂದು ಹೇಳಿದ ಮೇಲೆ ಅಲ್ಲಿರತಕ್ಕ ಪರಿಸ್ಥಿತಿ ಬಹಳ ಕೆಟ್ಟ ಪರಿಸ್ಥಿತಿಗೆ ಮುಟ್ಟಿದೆ. ಅವರು ಉಪವಾಸ ಸತ್ಯಾಗ್ರಹ ಮಾಡಿರುವ ಅಂಶ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಬಂದಿದೆ. ಅವರಿಗೆ ನಿಜವಾಗಿ ಇರತಕ್ಕ ತೊಂದರೆ ಅಥವಾ ತಾಪತ್ರಯ ಏನೆಂಬುದು ಈ ಮಾನ್ಯ ಸಭೆಗೆ ಗೊತ್ತಿಲ್ಲ. ಅವರ ಪಕ್ಷದ ಸದಸ್ಯರೊಬ್ಬರು ಈಗ ಉಪವಾಸ ಸತ್ಯಾಗ್ರಹ ಮಾಡುವುದಕ್ಕೆ ಪ್ರಾರಂಭಮಾಡಿದ್ದಾರೆ. ಅವರ ಜಿಲ್ಲೆಯ ಪರಿಸ್ಥಿತಿ ಯಾವ ಮಟ್ಟಕ್ಕೆ ಹೋಗಿದೆಯೆಂಬುದನ್ನು ಕೆಲವು ದಿನಗಳಲ್ಲಿ ಸ್ವಾಭಾವಿಕವಾಗಿಯೇ ಮನಗಾಣುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಈ ಒಂದು ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಕೊಡುವುದು ಬಹಳ ಸೂಕ್ತವಾಗಿದೆ. ಯಾವ ಕಾರಣದಿಂದ ಹೀಗೆ ಆಯಿತು, ಈ ರೀತಿ ಅವರು ಮನುಷ್ಯರ ಹೂಡುವುದಕ್ಕೆ ಕಾರಣವೇನು, ಇದಕ್ಕಲ್ಲಿ

ಏನಾದರೂ ರಾಜಕೀಯ ಪರಿಸ್ಥಿತಿ ಕಾರಣವೋ ಎಂಬುದನ್ನು ಸರ್ಕಾರದವರು ವಿಚಾರಮಾಡಬೇಕು. ಏಕೆಂದರೆ ಅಲ್ಲಿ ಪರಿಸ್ಥಿತಿ ಬಹಳ ಉಲ್ಬಣವಾಗಿದೆ. ನನಗೆ ಬಹಳ ಕಳವಳವಾಗಿದೆ. ಈಗಾಗಲೇ ಆ ಪ್ರದೇಶಗಳಲ್ಲಿ ಮಾನ್ಯ ಶ್ರೀ ಅರ್ಮುಗಂ ಅವರು ಪ್ರವಾಸ ಮಾಡುತ್ತಿರುವುದರಿಂದ ಅವರ ವರದಿಯನ್ನು ನಾವು ನಿರೀಕ್ಷಣೆ ಮಾಡುತ್ತಿದ್ದೇವೆ. ಈ ಮಧ್ಯದಲ್ಲಿ ಇಂಥಹ ಘಟನೆ ನಡೆದಿದೆ. ಇದರಿಂದ ರಾಜ್ಯದ ಜನರನ್ನು ಕಳವಳವುಂಟುಮಾಡಿದೆ. ಹಿಂದೆ ಒಂದೆರಡು ಸಾರಿ ಇದೇ ರೀತಿಯಾಗಿ ಗುಲ್ಬರ್ಗ ಜಿಲ್ಲೆಯ ಒಬ್ಬ ಶಾಸನ ಸಭಾಸದಸ್ಯರು ಉಪವಾಸ ಮಾಡಿದಾಗ ಅವರಿಗೆ ಮಾನ್ಯ ಮಂತ್ರಿಗಳು ಸಮಾಧಾನ ಹೇಳಿ ಉಪವಾಸ ಸತ್ಯಾಗ್ರಹ ಮಾಡುವ ಕಾರ್ಯಕ್ರಮವನ್ನು ನಿಲ್ಲಿಸಿದರು. ಮತ್ತೆ ಈಗ ಪ್ರಾರಂಭವಾಗಿದೆ. ದೇಹ ದೊಳಗೆ ರೋಗ ಇಟ್ಟುಕೊಂಡು ಮೇಲೆ ಎಷ್ಟೇ ತೇಪೆ ಹಾಕಿದರೂ ಕೂಡ ನಿಜವಾಗಿ ಹಳೆಯ ರೋಗ ಬಹಳವಾಗಿ ಜಾಸ್ತಿಯಾಗುತ್ತಿದೆ. ಇವತ್ತಿನ ದಿವಸ ಆಡಳಿತ ಪಕ್ಷದ ಆ ಸದಸ್ಯರ ಬಗ್ಗೆ ಸರ್ಕಾರದವರು ಏನಾದರೂ ಒಂದು ತೀರ್ಮಾನಕ್ಕೆ ಬಂದಿದ್ದರೆ ಒಂದು ರೀತಿಯ ಉತ್ಪ್ರೇಕ್ಷೆ ಆಗುತ್ತಿತ್ತು ಎಂಬುದಾಗಿ ಯಾರಾದರೂ ಹೇಳಬಹುದು. ಆದರೆ ಈ ವಿಚಾರದಲ್ಲಿ ಅಂಥಹ ಉತ್ಪ್ರೇಕ್ಷೆ ಪ್ರಶ್ನೆ ಏನೂ ಇಲ್ಲ. ಏಕೆಂದರೆ ಅವರ ಪರಿಸ್ಥಿತಿ ತೀರಾ ಕೆಡುತ್ತಿದೆ. ಇದನ್ನು ಹಾಗೆಯೇ ಬಿಟ್ಟರೆ ಈ ರಾಜ್ಯದಲ್ಲಿ ಮುಂದೆ ಕೆಟ್ಟ ಪರಿಸ್ಥಿತಿಯುಂಟಾಗಿ ದುಷ್ಪರಿಣಾಮವಾಗುವುದೂ ಉಂಟು. ಆದ್ದರಿಂದ ಇಂಥಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸಮಾಧಾನಕರವಾಗಿ ಉತ್ತರವನ್ನು ನೀಡಬೇಕು. ಆ ಪ್ರದೇಶದ ಜನರಿಗೆ ನಿಜವಾಗಿ ಅಭಾವ ಪರಿಸ್ಥಿತಿ ಇರುವುದರಿಂದ, ಅದನ್ನು ಸುಧಾರಿಸುವುದಕ್ಕೆ ಬೇಕಾದಂಥ ಕೆಲಸಗಳನ್ನು ತ್ವರಿತವಾಗಿ ಮಾಡಬೇಕು. ಅಲ್ಲಿ ಅಷ್ಟು ಕೆಲಸಗಳಾಗದೇ ಇರುವುದಕ್ಕೆ ಅಲ್ಲಿರತಕ್ಕ ಅಧಿಕಾರಿಗಳ ವರ್ತನೆ ಕೆಟ್ಟಿರುವುದೇ ಕಾರಣವೆಂದು ಹೇಳಬಹುದು. ನಾನು ತಿಳಿದ ಹಾಗೆ ಇಂಥಹ ಕಷ್ಟ ಪರಿಸ್ಥಿತಿ ಇರುವಾಗ ಈ ರಾಜ್ಯದ ಅಧಿಕಾರಿಗಳು ಹೊಂದಾಣಿಕೆಯಿಂದ ಕೆಲಸ ಮಾಡದಿದ್ದರೆ ಎಷ್ಟೇ ಪ್ರಯತ್ನಪಟ್ಟರೂ ಅಲ್ಲಿ ಸ್ಥಳದಲ್ಲಿ ಹೋಗುವಾಗ ನಿರಾಶೆಯ ಪರಿಸ್ಥಿತಿಯನ್ನು ಮಂಟ್ಟಬಹುದು. ಆದ್ದರಿಂದ ಈ ರಾಜ್ಯದ ಅಧಿಕಾರಿಗಳು ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಂಡು ಕೆಲಸ ಮಾಡುವ ಪ್ರಯತ್ನವನ್ನು ಅವರಿಂದ ಮಾಡಿಸದಿದ್ದರೆ ನಿಮ್ಮ ಎಲ್ಲಾ ಯೋಜನೆಗಳೂ ವಿಫಲವಾಗುತ್ತವೆ. ಆಗ ನೀವ ಎಲ್ಲಾ ಆರೋಪಣೆಗಳಿಗೂ ಮತ್ತು ದೂಷಣೆಗಳಿಗೂ ಜವಾಬ್ದಾರರಾಗಬೇಕಾಗುತ್ತದೆಂದು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ.

† ಶ್ರೀ ಬಾಪುಗೌಡ ರಾಯಪ್ಪ: —ಗುಲ್ಬರ್ಗ ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೆ. ಮಾನ್ಯ ಶ್ರೀ ಅರ್ಮುಗಂ ಅವರು ಅಲ್ಲಿನ ವಿಚಾರಗಳನ್ನು ತಿಳಿಯಲಿತ್ತಿರುವಾಗ, ಒಂದು ಸತ್ಯ ಹೆಣದ ಪ್ರದರ್ಶನವೂ ಅವರಿಗೆ ಆಗಿದೆಯೆಂಬ ಅಂಶವನ್ನು ನಾನು ತಿಳಿದಂಬಂದೆ ಅಲ್ಲಿ ಇಷ್ಟೊಂದು ಭೀಕರ ಪರಿಸ್ಥಿತಿ ಇರುವ ಕಾಲಕ್ಕೆ ಅದನ್ನು ಚೆನ್ನಾಗಿ ವಿಚಾರ ಮಾಡ ಬೇಕು ಅಫ್‌ಜಲ್‌ಪುರ ತಾಲ್ಲೂಕಿನಲ್ಲಿ ಅಲ್ಲಿಗೆ ಬರತಕ್ಕ ಎಂ ಎಸ್.ಆರ್ ಟಿ.ಸಿ. ಬಸ್ಸುಗಳನ್ನು ಜನರು ನಿಲ್ಲಿಸಿ. ಅನ್ನ, ನೀರು ಸಿಗುವ ಕಡೆ ನಮ್ಮನ್ನು ಕರೆದುಕೊಂಡು ಹೋಗಿ ಎಂಬುದಾಗಿ ಹೇಳುತ್ತಿದ್ದಾರೆ. ಗುಲ್ಬರ್ಗಾದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದರು. ಆಲ್ಲಿನ ಕಷ್ಟ ಪರಿಸ್ಥಿತಿಯನ್ನು ನೋಡಿ ಇಲ್ಲಿಂದ ಅನೇಕ ಜನರನ್ನು ಕಳುಹಿಸಿಕೊಟ್ಟರೆ, ಅಲ್ಲಿಗೆ ಹೋಗಿರತಕ್ಕವರೇ ಅಲ್ಲಿ ಏನೂ ಕೆಲಸವಿಲ್ಲವೆಂದು ಬೇರೆ ಕಡೆಗೆ ಹೋಗುತ್ತಿದ್ದಾರೆ.
ಅಲ್ಲಿ ಕೆಲಸ ಪ್ರಾರಂಭ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇದುವರೆಗೂ ಕೆಲಸ ಪ್ರಾರಂಭ ಮಾಡಿಲ್ಲ. ಅಲ್ಲಿ ಒಡ್ಡಿನ ಕೆಲಸ ಮತ್ತು ರಸ್ತೆಗಳ ಕೆಲಸ ಮುಗಿದು ಹೋಗಿದೆ. ನಿನ್ನೆ ಅರ್ಮುಗಂ ಕಮಿಶನ್ ಅಲ್ಲಿ ಹೋದಾಗ ಅಫ್‌ಜಲ್‌ಪುರದಲ್ಲಿ ಒಂದು ಶವ ಸಹ ಪ್ರದರ್ಶನ ಮಾಡಿದ್ದಾರೆ. ಇಂಥಹ ಒಂದ ° ಗಂಭೀರ ಪರಿಸ್ಥಿತಿ ಇರುವಾಗ ಸರ್ಕಾರದವರು ಈಗಲಾದರೂ ಎಚ್ಚೆತ್ತು ಗುಲ್ಬರ್ಗದಲ್ಲಿ ಏನು ನಡೆದಿದೆ, ಬಿಜಾಪುರ ದಲ್ಲಿ ಏನು ನಡೆದಿದೆ ಎಂಬುದನ್ನು ಮನಗಂಡು ಇಲ್ಲಿ ಒಂದು ವಾರಘೂಟಿಂಗ್ ಮೇಲೆ ಕೆಲಸಮಾಡಿ ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಜೆ. ಪಿ. ನಂಜಯ್ಯನಮಠ.—ನಮ್ಮ ಮಾನ್ಯ ಮಿತ್ರರಾದಂಥಹ ಸುರಪುರ ಮಲ್ಲಪ್ಪನವರು ಈ ಬಿಜಾಪುರ ಜಿಲ್ಲೆಯಲ್ಲಿದ್ದಂಥಹ ಪರಿಸ್ಥಿತಿಯ ಬಗ್ಗೆ ತೀವ್ರ ಕಾರ್ಯಕ್ರಮ ಸರ್ಕಾರದವರು ತೆಗೆದುಕೊಂಡಿಲ್ಲ ವೆಂದು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಬಿಜಾಪುರ ಜಿಲ್ಲೆಯ ಬಡಬಗ್ಗರ ಬಗ್ಗೆ ಪ್ರತೀ ದಿವಸ ಕಣ್ಣೀರು ಸುರಿಸಿ ಈ ಒಂದು ನಿರ್ಧಾರವನ್ನು ಕೈಗೊಂಡಿದ್ದಾರೆ. ಈಗ ಬಿಜಾಪುರ ಜಿಲ್ಲೆಯ ಪ್ರಶ್ನೆಯು ಗುಲ್ಬರ್ಗ, ಮತ್ತು ಬೀದಾರ ಜಿಲ್ಲೆಯ ಪ್ರಶ್ನೆಯಲ್ಲಿ ಆಡಕವಾಗಿ ಹೋಗಿಬಿಟ್ಟಿದೆ. ಬಿಜಾಪುರ ಜಿಲ್ಲೆಯಲ್ಲಿ ಹಿಂದೆ ಬಿತ್ತಿದಂತಹ ಬೆಳೆ ಇನ್ನೂ ಪೂರ್ಣವಾಗಿಲ್ಲ. ಬಿಳಿಗಿ ಮತ್ತು ಜಮಖಂಡಿಯಲ್ಲಿ ಜೋಳದ ಪೀಕಂಗಳು ಮೊದಲು ಎತ್ತರವಾಗಿ ಕಂಡು ಬಂತೆಂದು ಅಧಿಕಾರಿಗಳು ಬಹಳ ಚೆನ್ನಾಗಿದೆ ಎಂದು ರಿ ಪೋರ್ಟು ಮಾಡಿದರು.

ಆದರೆ ಇತ್ತೀಚೆಗೆ ನೀರಿಲ್ಲದೆ ಜೋಳದ ಪೀಕುಗಳು ಸಂಪೂರ್ಣವಾಗಿ ನಾಶವಾಗಿ ಹೋಗಿವೆ. ಇದನ್ನು ಕಂಡು ಅಲ್ಲಿನ ಜನರು ಸಂಪೂರ್ಣವಾಗಿ ನಿರಾಶೆಯನ್ನು ಹೊಂದಿದ್ದಾರೆ. ಅದೇ ರೀತಿ ಹುನುಗುಂದ ತಾಲ್ಲೂಕಿನಲ್ಲಿಯೂ ಅರ್ಧ ತಾಲ್ಲೂಕಿನಲ್ಲಿ ಏನೂ ಬಿತ್ತನೆಯಾಗಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಈಗ ಪರಿಸ್ಥಿತಿ ಏನಾಗಿದೆ ಎಂಬುದನ್ನು ನಮ್ಮ ಸ್ನೇಹಿತರು ಸ್ವಲ್ಪ ಮಂಟ್ಪಿಗೆ ಹೇಳಿದ್ದಾರೆ. ಒಬ್ಬ ಮಾನ್ಯ ಸದಸ್ಯರು ಎರಡು ದಿನಗಳಿಂದ ಉಪವಾಸ ಮಾಡುತ್ತಾರೆಂದರೆ ಇದು ಬಹಳ ಜರೂರಾದ ಪ್ರಶ್ನೆ.

ನಿಮ್ಮನ್ನು ನೂರೆಂಟು ಬಾರಿ ಕೇಳಿದರೂ ನೀವು ಏನೂಮಾಡಿಲ್ಲವೆಂದು ಅವರು ಈಗ ಉಪವಾಸ ಮಾಡುತ್ತಿದ್ದಾರೆ. ನಾವು ಏನಾದರೂ ಮಾಡಿದರೆ, ಅದರಲ್ಲಿ ರಾಜಕೀಯ ಮಾಡುತ್ತೀವೆ ಎಂದು ಹೇಳುತ್ತೀರಿ. ಆದರೆ ಈಗ ನಿಮ್ಮ ಪಕ್ಷದವರೇ ಮಾಡಿದ್ದಾರೆ. ಆದ್ದರಿಂದ ತಾವು ಇದರ ಬಗ್ಗೆ ಒಂದು ಸಮಾಧಾನಕರವಾದ ಹೇಳಿಕೆ ಕೊಟ್ಟರೆ ಎಲ್ಲರಿಗೂ ತೃಪ್ತಿಯಾಗಬಹುದೆಂದು ಹೇಳುತ್ತೇನೆ. ಏಕೆಂದರೆ ಮಾನ್ಯ ಹುಚ್ಚಮಾಸ್ತಿಗೌಡರು ಅಲ್ಲಿ ಜನ ಸತ್ತಿಲ್ಲವೆಂದು ಹೇಳಿದರು. ಆದರೆ ಆರ್ಮುಗಂ ಕಮಿಶನ ಹೋದಾಗ ಸತ್ತವನ ಒಂದು ಶವವನ್ನೇ ತಂದು ತೋರಿಸಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು).—ಜನರು ಸಾಯುತ್ತಾ ಇರುವುದನ್ನು ತಪ್ಪಿಸುವುದಕ್ಕಾಗುತ್ತದೆಯೇ ? ಆದರೆ ಅಲ್ಲಿ ಹೆಣ ಪರೀಕ್ಷೆಗೆ ಅವರು ಬಿಟ್ಟು ಕೊಟ್ಟಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್,—ನಿಮಗೆ ಹೊಟ್ಟೆಗಿಲ್ಲದೆ ಸತ್ತರೂ ಹಾಗೆ ಸತ್ತಿಲ್ಲವೆಂದು ವರದಿ ತರಿಸಿ ಕೊಳ್ಳುವ ಶಕ್ತಿ ಇದೆ. ಆದರೂ ಕೂಡ ಜಾನುವಾರುಗಳು ಸಾಯುತ್ತಾ ಇವೆ. ಅವುಗಳ ಫೊಟೋ ಸಹ ಪೇಪರಿನಲ್ಲಿ ಬಂದಿದೆ. ಇದರ ಬಗ್ಗೆ ಮುಖ್ಯಮಂತ್ರಿಯವರು ಕಳಕಳಿಯನ್ನು ವ್ಯಕ್ತಪಡಿಸಿದ್ದು ನಿಜ ಆದರೆ ಇನ್ನೂ ಹೆಚ್ಚಿನ ಪ್ರಯತ್ನ ಮಾಡಿ ಸಮಸ್ಯೆಯನ್ನು ಬಗೆಹರಿಯುವಂತೆ ಮಾಡಬೇಕೆಂದು ಹೇಳುತ್ತೇನೆ.

†ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಅಲ್ಲಿ ಒಬ್ಬ ಅಧಿಕಾರಿಯೂ ಸಹ ಇವರು ಹೇಳಿದ್ದನ್ನು ಕೇಳುವುದಕ್ಕೆ ತಯಾರಾಗಿಲ್ಲ. ಬೀದಾರ್ ಜಿಲ್ಲೆಯಲ್ಲಿ ೧೭ ಮೈನರ್ ಇರಿಗೇಶನ್ ಪ್ರೊಜೆಕ್ಟುಗಳ ಇನ್‌ವೆಸ್ಟಿಗೇಶನ್ ಮಾಡಿ ರಿಪೋರ್ಟು ಕಳಿಸಿ ಎಂದು ಸೂಚನೆಯನ್ನು ಅಲ್ಲಿಯ ಅಧಿಕಾರಿಗಳಿಗೆ ಕಳಿಸಿದರೆ, ಅಲ್ಲಿಯ ಅಧಿಕಾರಿಗಳು ಕೇವಲ ನಾಲ್ಕು ಮಾತ್ರ ಇನ್‌ವೆಸ್ಟಿಗೇಶನ್ ಮಾಡಿದ್ದಾರೆ. ಇದು ಅಲ್ಲಿಯ ಅಧಿಕಾರಿಗಳು ತೋರಿಸಂತಿರುವ ಇಂಟರೆಸ್ಟ್. ನನಗೆ ಇದರ ಟ್ರೂ ಕಾಪಿ ಸಹ ಕಳಿಸಿದ್ದಾರೆ. ಎರಡನೆಯದಾಗಿ ಮಾನ್ಯ ಸುರಪುರ ಮಲ್ಲಪ್ಪನವರು ಈ ಪರಿಸ್ಥಿತಿಯ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಅವರ ಪ್ರಾಣ ಎಲ್ಲಿಯಾದರೂ ಹೋದರೆ ಪರಿಸ್ಥಿತಿ ಇನ್ನೂ ಭಯಂಕರವಾಗುತ್ತದೆ. ಆದ್ದರಿಂದ ಇದರ ಬಗ್ಗೆ ಒಂದು ಸೂಕ್ತವಾದ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ (ಮುಖ್ಯಮಂತ್ರಿಗಳು).—ತಾವು ಅವರನ್ನು ಸಮಾಧಾನ ಮಾಡಿ ಬಂದಿದ್ದೀರಾ ? ಅದನ್ನು ನಮಗೆ ನೋಡಿಕೊಳ್ಳುವ ಜವಾಬ್ದಾರಿ ಇದ್ದೇ ಇದೆ.

ಶ್ರೀ ವಿ. ಎನ್. ಪಾಟೀಲ್.—ನಮ್ಮ ಪ್ರದೇಶದಲ್ಲಿ ತಮಗಿಂತ ಸ್ವಲ್ಪ ಹೆಚ್ಚಿನ ಜವಾಬ್ದಾರಿ ನಮಗೆ ಇದೆ.

ಶ್ರೀ ಡಿ. ದೇವರಾಜ ಅರಸ್.—ತಮಗೆ ಅಂಥ ಜವಾಬ್ದಾರಿ ಇದ್ದರೆ ಹೋಗಿ ಹೇಳಿ.

†ಶ್ರೀ ಎಸ್. ವೈ. ಪಾಟೀಲ್ (ಸಿಂದ್ಗಿ).—ಸ್ವಾಮಿ, ನಮ್ಮ ಇಂಡಗಿ, ಸಿಂಧಗಿ ತಾಲ್ಲೂಕುಗಳಲ್ಲಿ ಸಮಸ್ಯೆಯು ಬಹಳ ವಿಕೋಪಕ್ಕೆ ಹೋಗಿದೆ. ನಾವು ಇಲ್ಲಿಗೆ ೨೫ನೇ ತಾರೀಖಿಗೆ ಬರುವ ಸಮಯ ಅಲ್ಲಿ ಜನರು ನೀವು ಈಗ ಬೆಂಗಳೂರಿಗೆ ಹೋಗಿ ಏನು ಮಾಡುತ್ತೀರಿ : ನಮ್ಮ ಕಷ್ಟದ ಬಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎನ್ನುವ ಬಗ್ಗೆ ತಾರು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಅಲ್ಲಿ ಜನರು ಸರ್ಕಾರದವರು ಸಾಧಾರಣವಾಗಿ ಇಂಥ ಕೆಲಸವನ್ನೇ ಕೂಡಿ ಎಂದು ಕೇಳುವುದಿಲ್ಲ.

2-00 P M.

ಆದಕ್ಕಾಗಿ ನಾನು ತಮ್ಮಲ್ಲಿ ಬಹಳ ನಮ್ರತೆಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಆ ಭಾಗದ ಜನಗಳಿಗೆ ರಸ್ತೆಯ ಕೆಲಸ, ಕೆರೆಗಳಲ್ಲಿ ಡೀಸಿಲ್ಟಿಂಗ್ ಮಾಡುವ ಕೆಲಸ ಮುಂತಾದ ಕೆಲಸಗಳನ್ನು ತೆಗೆದು

ಕೊಂಡು ಮೊದಲು ಜನಗಳಿಗೆ ಕೆಲಸವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಎರಡು ಹಳ್ಳಿಗಳಿಗೆ ಸೇರಿಸಿ ಇಂಥಾದ್ದು ಕೆಲಸ ಇದೆ ಅದನ್ನು ಮಾಡಿ ಎಂದು ತೋರಿಸಿ, ಮತ್ತು ಕುಡಿಯುವ ನೀರಿಗೆ ವ್ಯವಸ್ಥೆ ಮಾಡಲು ಬಾವಿಗಳನ್ನು ತೋಡಿಸಬೇಕು. ನನಗೆ ಉಪವಾಸ ಮಾಡುವುದಕ್ಕೆ ಶಕ್ತಿ, ಸಾಮರ್ಥ್ಯ ಇಲ್ಲ, ಇಲ್ಲದಿದ್ದರೆ ನಾನು ಖಂಡಿತವಾಗಿ ಉಪವಾಸ ಮಾಡುತ್ತಿದ್ದೆ. ಒಂದುವೇಳೆ ನಾನು ಉಪವಾಸ ಮಾಡಿದರೂ ನೀವು ಸತ್ತರೆ ಸಾಯುಲಿ ಎಂದು ಬಿಡುತ್ತೀರಿ ಎಂದು ನಾನು ಉಪವಾಸ ಮಾಡುವುದನ್ನು ಕೈಬಿಟ್ಟಿದ್ದೇನೆ. ನಾವು ಊರಿಗೆ ಹೋಗುವುದಕ್ಕೆ ಸಾಧ್ಯವಿಲ್ಲ ದಯವಿಟ್ಟು ಆ ಬರಗಾಲದ ಪ್ರದೇಶದ ಜನಗಳಿಗೆ ಕೆಲಸವನ್ನು ಒದಗಿಸಿ, ಇಂಡಿ ತಾಲ್ಲೂಕಿನಲ್ಲಿ ಪರಿಹಾರಕಾಮಗಾರಿಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್ : (ಮುಖ್ಯಮಂತ್ರಿಗಳು)

ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಶ್ರೀಮಾನ್ ಸುರ್‌ಪುರ್ ಮಲ್ಲಪ್ಪನವರು ಉಪವಾಸ ಕುಳಿತುಕೊಂಡಿರುವುದು ಪತ್ರಿಕೆಯಲ್ಲಿ ಬಂದಿದೆ. ಈ ಸಾರಿ ಬಂದಿರತಕ್ಕ ಕ್ಷಾಮ ಬಹುಶಃ ಹಿಂದೆ ಬಳ್ಳಾರಿಯಲ್ಲಿ ೧೮೭೧-೭೨ ನೇ ಇಸವಿಯಲ್ಲಿ ಬಂದಿತ್ತು ಎಂದು ಫಾಮಿನ್ ಗೆಜೆಟಿಯರ್‌ನಲ್ಲಿ ಇತ್ತು. ಹಾಗೆಯೇ ಹಿಂದೆ ಬಿಜಾಪುರದಲ್ಲಿಯೂ ಇತ್ತು ಎಂದೂ ಗೆಜೆಟಿಯರ್‌ನಲ್ಲಿ ಇದೆ ಇದೂ ಬಹಳ ಹಿಂದೆ ಬಂದದ್ದು. ಈ ಸಾರಿ ಬಂದಿರತಕ್ಕ ಬರಗಾಲ ಬಹಳ ಭೀಕರವಾಗಿದೆ. ಇದು ಸರ್ಕಾರಕ್ಕೆ ಗೊತ್ತಿಲ್ಲದ ವಿಚಾರವೇನೂ ಅಲ್ಲ. ಈ ಸಂದರ್ಭದಲ್ಲಿ ಮಾನ್ಯ ಸದಸ್ಯರು ಕೆಲವರು ಅವರ ಸ್ಥಳದಲ್ಲಿ ಗೊತ್ತಿರತಕ್ಕ ವಿಚಾರವನ್ನು ವ್ಯಕ್ತಪಡಿಸುವುದರಲ್ಲಿ ತಪ್ಪೇನು ಇಲ್ಲಿ. ಕೆಲವು ಸಂದರ್ಭಗಳಲ್ಲಿ ಸ್ಥಳೀಯವಾಗಿ ಏನಾದರೂ ಲೋಪಗಳು ಇದ್ದರೆ ಅದನ್ನು ನಮ್ಮ ಗಮನಕ್ಕೆ ತಂದರೆ ಅದನ್ನು ಸರಿಪಡಿಸೋಣ. ಇದರಲ್ಲಿ ಒಂದು ಮಾತ್ರ ನನಗೆ ಸಂತೋಷವಾಯಿತು. ಅದು ಏನೆಂದರೆ ಶ್ರೀಮಾನ್ ಶಂಕರಗೌಡಪಾಟೀಲರು ಉಪವಾಸ ಮಾಡುವುದು ಸರಿಯಾದ್ದಲ್ಲ ಎಂದು ಹೇಳಿದ ಹಾಗೆ ಆಯಿತು. ಉಪವಾಸ ಮಾಡುವುದಕ್ಕೆ ಅವರಿಗೆ ಶಕ್ತಿ ಇಲ್ಲ ಎಂದು ಅವರು ಹೇಳಿದ ಹಾಗೆ ಆಯಿತು. ಯಾರು ಉಪವಾಸ ಮಾಡುವುದರಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುವುದಿಲ್ಲ ಸರ್ಕಾರದವರು ಈ ಬಗ್ಗೆ ಉದಾಶೀನ ಮಾಡಿದ್ದಾರೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಮಾನ್ಯ ಸದಸ್ಯರು ಯಾವ ಸಂದರ್ಭದಲ್ಲಿ ಏನೇನು ಸಲಹೆಗಳನ್ನು ಕೊಟ್ಟಿದ್ದಾರೆ ಅವುಗಳನ್ನೆಲ್ಲಾ ನಾವು ಮಾಡುತ್ತಾ ಬಂದಿದ್ದರೂ ಕೂಡ ಮಾನ್ಯ ಸದಸ್ಯರು ಟೀಕೆಯನ್ನು ಮಾಡುತ್ತಿದ್ದಾರೆ. ಮಹಾರಾಷ್ಟ್ರದಲ್ಲಿ ದನಗಳು ಸಾಯುತ್ತಿವೆ, ರಾಜಾಸ್ಥಾನದಲ್ಲಿ ದನಗಳು ಸಾಯುತ್ತಿವೆ ಯಾವಾಗಲೂ ಕ್ಷಾಮ ಬಂದಾಗ ದನಗಳು ಸಾಯುತ್ತವೆ. ಜನಗಳನ್ನು ರಕ್ಷಣೆ ಮಾಡುವ ಜವಾಬ್ದಾರಿಯನ್ನು ಸರ್ಕಾರ ಹೊರಲೇಬೇಕು. ನಾನು ಸ್ಪಷ್ಟವಾಗಿ ಹೇಳುತ್ತೇನೆ, ಹಿಂದೆ ಇದ್ದ ಸರ್ಕಾರದವರಾಗಲೀ, ಮುಂದೆ ಬರತಕ್ಕ ಸರ್ಕಾರವಾಗಲೀ, ಈಗ ಇರತಕ್ಕ ಸರ್ಕಾರವಾಗಲೀ ಲಕ್ಷಾಂತರ ದನಗಳನ್ನು ಕಾಪಾಡುವುದು ಕಷ್ಟವಾಗುತ್ತದೆ. ಈಗ ಗುಲ್ಬರ್ಗಾದಲ್ಲಿ ೮ ಲಕ್ಷ ಜಾನುವಾರುಗಳು ಇವೆ. ಅವುಗಳನ್ನೆಲ್ಲಾ ಬದುಕಿಸುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ಜನಸಂಖ್ಯೆ ೧೭ ಲಕ್ಷ ಇದೆ. ಅವರ ರಕ್ಷಣೆಯನ್ನು ಮಾಡಿದರೆ ಸಾಕು. ಇದರ ಜೊತೆಗೆ ೮ ಲಕ್ಷ ದನಗಳನ್ನು ನಾವು ಬದುಕಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅವು ಹೋಗಿಯೇ ಹೋಗುತ್ತವೆ. ಏನು ಮಾಡುವುದಕ್ಕಾಗುತ್ತದೆ ? ಇದೂ ಕ್ಷಾಮ ಬಂದರೆ ಅನಿವಾರ್ಯ. ಸ್ವಲ್ಪಮಟ್ಟಿಗೆ ಕೆಲವಾರು ಎತ್ತುಗಳು ಮತ್ತು ಹಾಲು ಕರೆಯುವ ಹಸುಗಳು ಇವುಗಳನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾದೀತು. ಎಲ್ಲಾ ದನಗಳನ್ನೂ ರಕ್ಷಣೆ ಮಾಡುವುದು ಸಾಧ್ಯವಿಲ್ಲದ ಮಾತು. ಅದನ್ನು ಯಾರೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ.

ಕೆಲಸ ಮಾಡಿಸುವ ಬಗ್ಗೆ ಎಲ್ಲೆಲ್ಲಿ ಕೆಲಸಗಳನ್ನು ತೆಗೆದುಕೊಂಡು ಜನಗಳಿಗೆ ಕೆಲಸವನ್ನು ಒದಗಿಸಬೇಕೋ ಅದನ್ನು ಮಾಡುತ್ತಿದ್ದೇವೆ. ಇದರಲ್ಲಿ ಕೆಲವು ಕಡೆ ಸಾಕಷ್ಟು ಸಿಬ್ಬಂದಿ ಇಲ್ಲ ಎನ್ನುವ ಮಾತನ್ನು ಹೇಳಿದರು. ಸಾಯಿಲ್ ಕನ್‌ಸರ್‌ವೇಷನ್ ಕೆಲಸವನ್ನು ಈಗ ೭-೮ ವರ್ಷಗಳಲ್ಲಿ ಮಾಡಬೇಕಾಗಿರುವಷ್ಟು ಕೆಲಸವನ್ನು ಈ ಒಂದು ವರ್ಷದಲ್ಲಿ ಮಾಡಿದೆ. ಬೇಕಾದರೆ ತಮಗೆ ನಾನು ಅಂಕಿ ಅಂಶಗಳನ್ನು ಕೊಡುತ್ತೇನೆ. ಸಿಬ್ಬಂದಿಯನ್ನು ಆಗಾಗ್ಗೆ ನೇಮಕ ಮಾಡುತ್ತಿದ್ದೇವೆ. ಸಾಯಿಲ್ ಕನ್‌ಸರ್‌ವೇಷನ್ ಕೆಲಸಕ್ಕೆ ಸ್ವಲ್ಪ ಟ್ರೈನಿಂಗ್ ಆದ ಹುಡುಗರು ಬೇಕು. ಆ ರೀತಿ ಟ್ರೈನಿಂಗ್ ಆಗಿರತಕ್ಕ ಹುಡುಗರನ್ನು ನಮ್ಮ ಸಹೋದ್ಯೋಗಿಗಳು ಯಾರನ್ನಾದರೂ ಕರೆದುಕೊಂಡು ಬರಲಿ ಅವರಿಗೆ ನಾವು ಕೆಲಸ ಕೊಡುತ್ತೇವೆ. ಅವರು ಸರ್ವೆ ಮಾಡತಕ್ಕದ್ದನ್ನು ಕಲಿತುಕೊಂಡಿರಬೇಕು. ಇನ್‌ಸ್ಟ್ರುಮೆಂಟ್ ಹಿಡಿದುಕೊಂಡು ಕೆಲಸ ಮಾಡಬೇಕು. ಡಂಪೀಸ್ ಹಿಡಿದು ಕೆಲಸ ಮಾಡಬೇಕು ಅಂಥವರನ್ನು ಆ ಕೆಲಸಕ್ಕೆ ಆರಿಸಬೇಕು.

ಶ್ರೀ ವಿ. ಎನ್. ಪಾಟೀಲರು ಮಾತನಾಡುತ್ತಾ ಮೈನರ್ ಇರಿಗೇಷನ್ ಬಗ್ಗೆ ೧೭ ಕೆಲಸಗಳ ಪಟ್ಟಿ ಹಾಕಿದ್ದಾರೆ. ಅವುಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರು. ಆ ವಿಚಾರ ಈಗ ನಮ್ಮ ಮುಂದೆ ಇಲ್ಲ. ಸುಮ್ಮನೆ ಪೇಪರ್ ಹಿಡಿದು ತೋರಿಸಿ ೧೭ ಕೆಲಸಗಳು ಇವೆ. ಅವುಗಳನ್ನು ತೆಗೆದುಕೊಂಡಿಲ್ಲ ಎಂದು ಹೇಳಿದರೆ ಆ ಕೆಲಸಗಳು ಯಾವುವು, ಅವು ಯಾವ ತಾಲ್ಲೂಕಿಗೆ ಸಂಬಂಧಪಟ್ಟ ಕೆಲಸಗಳು ಅವುಗಳ ಸರ್ವೆ ಆಗಿದೆಯೇ, ಅವು ಯಾವ ಸ್ಟೇಜಿನಲ್ಲಿವೆ ಎಂಬುದನ್ನು ಮಾನ್ಯ ಸದಸ್ಯರು ನಮ್ಮ ಗಮನಕ್ಕೆ ತಂದರೆ ಅವುಗಳನ್ನು ವಿಚಾರ ಮಾಡಬಹುದು. ಹಣವನ್ನು ಖರ್ಚು ಮಾಡುವಾಗ ಅವುಗಳನ್ನು ನೋಡಿ ಮಾಡಿ ಕೆಲಸಗಳನ್ನು ಮಾಡಬೇಕಾಗುತ್ತದೆ. ಸುಮ್ಮನೆ ಹಣವನ್ನು ಖರ್ಚು ಮಾಡುವುದಕಾಗುವುದಿಲ್ಲ. ಮಾನ್ಯ ಸದಸ್ಯರಿಗೆ ಈ ವಿಚಾರದಲ್ಲಿ ಎಷ್ಟು ಕಳಕಳಿ ಇದೆಯೋ ನಮಗೂ ಅಷ್ಟೇ ಕಳಕಳಿ ಇದೆ. ಕೆಲಸವನ್ನು ಮಾಡುವಾಗ ಚೆನ್ನಾಗಿ ಕೆಲಸ ಮಾಡುವುದನ್ನು ನಾನು ಒಪ್ಪುತ್ತೇನೆ. ಅದಕ್ಕೆ ಒಂದು ಲೆಕ್ಕ ಬೇಡ ಏನೂ ಬೇಡ ಯಾರು ಏನಾದರೂ ಮಾಡಿದರೂ ಸುಮ್ಮನೆ ದುಡ್ಡು ಕೊಡಿ ಎಂದು ಹೇಳುವುದಕ್ಕಾಗುತ್ತದೆಯೇ ?

ಮತ್ತೆ ಸತ್ಯಾಗ್ರಹದ ವಿಚಾರ ನನಗೆ ಗೊತ್ತಿಲ್ಲ. ನಾನು ದಹಲಿಗೆ ಹೋಗುವುದಕ್ಕೆ ಮುಂಚೆ...

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ) :—ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಿರುವ ವಿಷಯದ ಕಳಕಳಿ ನನಗೂ ಗೊತ್ತಿದೆ. ಅದರ ಬಗ್ಗೆ ಈಗಾಗಲೇ ಒಬ್ಬರನ್ನು ಈ ಸಭೆಯಿಂದ ಕಳುಹಿಸಲಾಗಿದೆ. ಅವರು ಆ ಭಾಗದಲ್ಲಿ ಎಲ್ಲ ಕಡೆಯೂ ಸುತ್ತಾಡಿಕೊಂಡು ಎಲ್ಲ ವಿಷಯಗಳನ್ನು ಸಂಗ್ರಹಿಸಿಕೊಂಡು ಬರುವವರಿದ್ದಾರೆ. ತಾವು ಹೇಳಿದ ಹಾಗೆ ಈ ಸಮಸ್ಯೆ ಮಾನವೀಯತೆಯಿಂದ ಕೂಡಿದ ಸಮಸ್ಯೆಯಾಗಿದೆ. ಸರ್ಕಾರದ ಮೇಲೆ ಈ ಬಗ್ಗೆ ಆರೋಪ ಮಾಡುವುದರಿಂದ ಏನೂ ಕೆಲಸವಾಗುವುದಿಲ್ಲವೆಂಬುದು ನಮಗೂ ಗೊತ್ತು. ಆದರೆ ಇದೇ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡು, ಬೆಂದ ಮನೆಯಲ್ಲಿ ಹಿರಿದದ್ದೇ ಲಾಭ ಎನ್ನುವಂತೆ ಕೆಲವರು ದುಡ್ಡು ಹೊಡೆಯುವ ಪ್ರಯತ್ನ ಮಾಡುತ್ತಿದ್ದಾರೆ. ಆ ಬಗ್ಗೆ ನನಗೆ ಇವೊತ್ತು ಒಂದು ಪತ್ರ ಬಂದಿದೆ. ಅದನ್ನು ನಿಮ್ಮ ಕಡೆಗೆ ಕಳಿಸಿಕೊಡುತ್ತೇನೆ. ಆ ಭಾಗಕ್ಕೆ ಒಂದು ಲಾರಿ ಹೆಂಚ್ಚನ್ನು ಕಳಿಸಿಕೊಡುವಾಗ, ಆ ಹೆಂಚ್ಚಿನ ಕೆಳಗಡೆ ಜೋಳದ ಮೂಟೆಗಳನ್ನು ಇಟ್ಟುಕೊಂಡು ಹೋಗಿ, ಆ ಭಾಗದಲ್ಲಿ ಬ್ಲಾಕ್‌ನಲ್ಲಿ ವ್ಯಾಪಾರ ಮಾಡುತ್ತಿದ್ದಾರೆಂದು ತಿಳಿದು ಬಂದಿದೆ. ಮತ್ತು ೭೦೦-೮೦೦ ಕೆ.ಜಿ ಹೆಂಚ್ಚನ್ನು ಸಾಗಿಸಿದ್ದರ ಬಗ್ಗೆ ೫೦೦ ರಿಂದ ೬೦೦ ರೂಪಾಯಿಗಳವರೆಗೆ ಬಾಡಿಗೆಯನ್ನು ಸರ್ಕಾರದಿಂದ ವಸೂಲಿ ಮಾಡುತ್ತಿದ್ದಾರೆಂದು ಸಹ ತಿಳಿದುಬಂದಿದೆ. ಕೆಲವು ದುಶ್ಶಕ್ತಿಗಳು ಸೇರಿಕೊಂಡು ತಮ್ಮ ಸ್ವಾರ್ಥಕ್ಕಾಗಿ ಲಾಭ ಮಾಡಿಕೊಳ್ಳುತ್ತಿದ್ದಾರೆ. ಈ ಬಗ್ಗೆ ನಾವೇನೂ ರಾಜಕೀಯ ಬಣ್ಣ ಹಚ್ಚಿ ಮಾತನಾಡಬೇಕೆಂಬ ಉದ್ದೇಶ ನಮಗೆ ಇಲ್ಲ. ಮತ್ತು ಸರ್ಕಾರಕ್ಕೆ ಈ ಬಗ್ಗೆ ಆಲಕ್ಷ್ಯ ಮನೋಭಾವ ಇದೆ ಎಂತಲೂ ಸಹ ನಾವು ಹೇಳುವುದಿಲ್ಲ. ಆದರೆ ಸರ್ಕಾರದ ಗಮನಕ್ಕೆ ಈ ವಿಷಯವನ್ನು ತರುವಾಗ ಕೆಲವರು ಕಾವೇರಿದ ಮನೋಭಾವದಿಂದ ಹಲವಾರು ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಅದರಂತೆ ನಿಮ್ಮ ಪಕ್ಷದವರೇ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಆ ಬಗ್ಗೆ ನಾನು ಹೆಚ್ಚು ಆಸಕ್ತಿವಹಿಸಿ ಹೇಳುವುದಕ್ಕೆ ಹೋಗುವುದಿಲ್ಲ. ನಮಗೆ ಇನ್ನು ಒಂದೆರಡು ದಿವಸಗಳಲ್ಲಿ ಏಕ ಸದಸ್ಯ ಆಯೋಗದವರ ವರದಿ ಬರುವುದಿದೆ. ಅದು ಬಂದ ಮೇಲೆ ಚರ್ಚೆ ಮಾಡೋಣ. ಅಪ್ಪರ್ ಕೃಷ್ಣ ಪ್ರಾಜೆಕ್ಟಿನಲ್ಲಿ ಕೆಲಸ ಮಾಡಲು ೫೧೦-೬೦೦ ಜನ ಹೋಗಿ ಕೆಲಸ ಸಿಕ್ಕದೆ ವಾಪಸ್ ಬಂದಿದ್ದಾರೆಂದು ತಿಳಿದುಬಂದಿದೆ. ಆ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕು. ಈಗ ತಾನೇ ಮಾನ್ಯ ಮುಖ್ಯಮಂತ್ರಿಗಳು ಸ್ಟಾಫ್ ವಿಚಾರ ಹೇಳಿದರು. ಸ್ಟಾಫ್‌ನ್ನು ಕೂಡಲೆ ತಯಾರು ಮಾಡಿ ಕಳಿಸಿಕೊಡುವುದಕ್ಕೆ ಆಗುವುದಿಲ್ಲ ಎಂಬ ಮಾತನ್ನು ನಾವು ಸಹ ಒಪ್ಪುತ್ತೇವೆ. ಬೇರೆ ಜಿಲ್ಲೆಗಳಲ್ಲಿರುವ ಸ್ಟಾಫ್‌ನ್ನು ಕೆಲವು ತಿಂಗಳವರೆಗೆ ಅಲ್ಲಿಗೆ ಡೈವರ್ಟ್ ಮಾಡಿ ಏಕೆಂದರೆ ಎಲ್ಲರೂ ಸಹಕರಿಸಿ ಕೆಲಸ ಮಾಡಬೇಕಾಗಿದೆ. ರಾಜಕೀಯ ಕಾರಣಕ್ಕಾಗಿ ವಾದ ಮಾಡುವ ಉದ್ದೇಶ ನಮಗಿಲ್ಲ. ಮಾನ್ಯ ಆರ್ಮುಗಂ ಅವರು ಏನು ಅಭಿಪ್ರಾಯ ಸೂಚಿಸುತ್ತಾರೋ, ಅದನ್ನು ನೋಡಿ ನಂತರ ಚರ್ಚೆ ಮಾಡೋಣ.

ಶ್ರೀ ಡಿ. ದೇವರಾಜ ಅರಸ್ :—ಮಾನ್ಯ ಅಧ್ಯಕ್ಷರೇ, ನಮ್ಮ ವಿರೋಧಪಕ್ಷದ ನಾಯಕರಿಗೆ ನನ್ನ ವಂದನೆಗಳು. ಏಕೆಂದರೆ, ಇರುವ ಪರಿಸ್ಥಿತಿಯನ್ನು ನಾವೆಲ್ಲರೂ ಸೇರಿ ಬಗೆಹರಿಸಬೇಕಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಮಾತನ್ನು ನಾನು ತುಂಬಾ ಸ್ವಾಗತ ಮಾಡುತ್ತೇನೆ, ನಮ್ಮ ಅಭಿಪ್ರಾಯವೂ ಅದೇ ಆಗಿರುವುದು. ತಾವು ಈಗ ಹೇಳಿದ ಹಾಗೆ ಕೆಲಸಗಳು ಯದ್ವಾತದ್ವಾ ಆಗುವುದನ್ನು ತಪ್ಪಿಸುವ ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಕೆಲವು ವಿಚಾರಗಳಲ್ಲಿ ನಿಧಾನವಾದರೂ ಆಗುತ್ತದೆ. ಕೆಲಸ ನಿಧಾನವಾಗುತ್ತದೆ ಎಂದು ಆತುರವಾಗಿ ಮಾಡುವುದಕ್ಕೆ ಹೋದರೆ, ತಾವು ಹೇಳಿದಂತೆ ಆಗಬಹುದು. ಎಲ್ಲ ಕೆಲಸವನ್ನು ಜಿಲ್ಲಾಧಿಕಾರಿಯವರೇ ಮಾಡುವುದಕ್ಕಾಗುವುದಿಲ್ಲ. ಅವರು ಕೆಲಸಗಳನ್ನು ಬೇರೆಯವರಿಗೆ

ಎನ್‌ಟ್ರಸ್ಟ್ ಮಾಡಬೇಕಾಗುತ್ತದೆ. ಕೆಲವು ಅನ್ಯಾಯಗಳು ಖಾಸಗೀ ಜನರಿಂದ ಕೂಡ ಆಗಿದೆ. ಎಲ್ಲಾ ಅನ್ಯಾಯಗಳು ಅಧಿಕಾರಿಗಳಿಂದಲೇ ಆಗಿದೆ ಎಂದು ಹೇಳುವುದು ಸರಿಯಲ್ಲ, ಕೆಲವು ಸಂದರ್ಭಗಳಲ್ಲಿ ಅಧಿಕಾರಿಗಳು ಮತ್ತು ಖಾಸಗೀ ಜನರು ಸಾಮೀಲಾಗಿರುವುದೂ ಉಂಟು. ಮುಖ್ಯವಾಗಿ ಯಾವುದೇ ಒಂದು ಕೆಲಸ ಉಪವಾಸ ಸತ್ಯಾಗ್ರಹ ಮಾಡುವುದರಿಂದ ಬಗೆಹರಿಯುವುದಿಲ್ಲ. ಈಗಾಗಲೇ ಸಾಕಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೇವೆ. ಇನ್ನೂ ತೆಗೆದುಕೊಳ್ಳುತ್ತಿದ್ದೇವೆ. ಸ್ಟಾಫ್ ವಿಚಾರ ಹೇಳಬೇಕೆಂದರೆ, ಎಲ್ಲ ಸ್ಟಾಫ್‌ನ್ನು ವರ್ಗ ಮಾಡಿದರೆ, ಅವರು ಕೂಡಲೇ ಹೋಗುವುದಕ್ಕಾಗುವುದಿಲ್ಲ, ಏಕೆಂದರೆ ಅವರು ಏನು ಕೆಲಸ ಮಾಡಿಸಿರುತ್ತಾರೋ, ಅದರ ಪೇಮೆಂಟನ್ನು ಅವರೇ ಮಾಡಬೇಕಾಗುತ್ತದೆ. ಪೇಮೆಂಟ್ ಆಗುವುದಕ್ಕೆ ಮೊದಲು ಅವರನ್ನು ಕಳಿಸಿಕೊಡುವುದು ಕಷ್ಟವಾಗುತ್ತದೆ. ಅದನ್ನು ಪೂರೈಸಿ ಹೋಗ ಬೇಕಾಗುತ್ತದೆ. ಈಗ ಕೆಲವರು ಹೋಗಿದ್ದಾರೆ. ಇನ್ನೂ ಹೋಗುವವರು ಇದ್ದಾರೆ, ಇನ್ನು ೧೫ ದಿವಸಗಳಲ್ಲಿ ಎಲ್ಲರೂ ಹೋಗುತ್ತಾರೆ. ಆಗ ಇನ್ನೂ ಹೆಚ್ಚಿನ ಕೆಲಸ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರು ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್ ವಿಚಾರ ಹೇಳಿದರು. ಜನರು ಯಾವ ಕಾರಣ ಕ್ಕಾಗಿ ಹೋದರು ಎಂಬುದು ನನಗೆ ಗೊತ್ತಿಲ್ಲ. ಅದನ್ನು ಕೇಳಿ ತಿಳಿಸಿಕೊಳ್ಳೋಣ. ಈಗ ಏನಾಗಿದೆ ಎಂದರೆ, ಯಾರದೇ ತಪ್ಪಿದ್ದರೂ ಸಹ, ಅದನ್ನು ಸರ್ಕಾರದ ಮೇಲೆ ಹೇಳೋಣ ಎಂದು ಕೆಲವರು ಭಾವಿಸಿದ್ದಾರೆ. ನನಗೆ ಇನ್ನೊಂದು ಕಡೆ ಬಂದ ವರ್ತಮಾನದ ಪ್ರಕಾರ, ಅಪ್ಪರ್‌ಕೃಷ್ಣಾ ಯೋಜನೆಯಲ್ಲಿ ಕೆಲಸ ಮಾಡಲು ಹೋದ ಜನರು ಇನಾಕ್ಯುಲೇಷನ್ ಹಾಕಿಸಿಕೊಳ್ಳುವುದು ಬೇಡ ಎಂದು ಹೇಳಿ ವಾಪಸ್ ಹೋದರು ಎಂಬುದು.

ಶ್ರೀ ಬಾಪುಗೌಡರಾಯಪ್ಪ :—೮೦೦ ಕೆಲಸಗಾರರು ಅಲ್ಲಿಗೆ ಹೋದಾಗ, ಫೀಸ್ ವರ್ಕ್‌ನ್ನು ಕೊಡಲು ನಾಲ್ಕಾರು ದಿವಸ ತಡವಾಗುತ್ತದೆಂದು ಹೇಳಿ ವಾಪಸ್ ಕಳಿಸಿದ್ದಾರೆ.

ಶ್ರೀ ಡಿ. ದೇವರಾಜ ಅರಸ್ :—ಕೆಲಸಗಾರರಿಗೆ ಇರುವುದಕ್ಕೆ ಷೆಡ್ಸ್, ಹಾಕಿಕೊಡಬೇಕಾಗುತ್ತದೆ. ಅದಕ್ಕಾಗಿ ಲಾರಿಗಳಲ್ಲಿ ಬೊಂಬುಗಳನ್ನು ಕಳಿಸಿದ್ದೇವೆ, ಈಗ ಕೆಲವರು ಏತಕ್ಕಾಗಿ ಹೋದರೋ ವಾಪಸ್ ಏತಕ್ಕೆ ಬಂದರು ಎಂಬುದನ್ನು ನೋಡಿ ಹೇಳಬೇಕಾಗುತ್ತದೆ.

ಶ್ರೀ ಜಿ. ಎನ್. ಪಾಟೀಲ್ :—ಮಾನ್ಯ ಮಂತ್ರಿಗಳಾದ ಮಾನ್ಯ ಬಸವಲಿಂಗಪ್ಪನವರು ಬಿಜಾಪುರ ಜಿಲ್ಲೆಯ ಕಡೆ ಪ್ರವಾಸ ಬಂದ ಕಾಲಕ್ಕೆ, ೮೦ ಪರ್‌ಸೆಂಟ್ ಕೆಲಸಗಾರರು ನಮ್ಮವರೇ ಇದ್ದರೆ ೩ ಮೈಲಿ ಯೊಳಗೆ ಒಂದೊಂದು ಕೆಲಸವನ್ನು ಒದಗಿಸಿಕೊಡುತ್ತೇವೆ, ಎರಡೂವರೆ ರೂಪಾಯಿಗಳ ಕೂಲಿ ಒಬ್ಬರಿಗೆ ಸಿಗುವಂತೆ ನೋಡಿಕೊಳ್ಳುತ್ತೇವೆಂದು ಭಾಷಣ ಮಾಡಿ ಬಂದಿದ್ದಾರೆ. ಈಗ ಅದಕ್ಕೆ ಹೊಂದಿಕೊಂಡು ಹೋಗುತ್ತೀರೋ ಹೇಗೆ ಎಂಬುದನ್ನು ಹೇಳಬೇಕು.

ಶ್ರೀ ಡಿ. ದೇವರಾಜ ಅರಸ್ :—ಈಗ ತಾವು ಅದನ್ನು ಹೇಳುತ್ತಿದ್ದೀರಿ. ಅದರ ಬಗ್ಗೆ ನನಗೆ ಏತಕ್ಕೆ ಬರೆದು ತಿಳಿಸಲಿಲ್ಲ ? ಮಾನ್ಯ ಬಸವಲಿಂಗಪ್ಪನವರು ಏನು ಹೇಳಿದ್ದಾರೆಂಬುದನ್ನು ತಿಳಿಯದೆ ಆ ಬಗ್ಗೆ ನಾನು ಹೇಗೆ ಹೇಳಲಿ ? ಅವರು ಏನು ಹೇಳಿದ್ದಾರೆಂಬುದನ್ನು ತಿಳಿದುಕೊಳ್ಳದೆ ಹೇಳುವುದ ಕ್ಕಾಗುವುದಿಲ್ಲ.

ಶ್ರೀ ಜಿ. ಎನ್. ಪಾಟೀಲ್ :—ಆ ಬಗ್ಗೆ ನಾನು ತಮಗೆ ಬರೆದು ಕಳುಹಿಸುತ್ತೇನೆ.

ಶ್ರೀ ಡಿ. ದೇವರಾಜ ಅರಸ್.—ಕಳುಹಿಸಿಕೊಡಿ. ಎಲ್ಲರಿಗೂ ಕೆಲಸ ಒದಗಿಸಿಕೊಡೋಣ. ಎರಡನೆಯ ವಿಚಾರವೆಂದರೆ, ಸತ್ಯಾಗ್ರಹದ ವಿಚಾರ. ಆ ಬಗ್ಗೆ ಮಾನ್ಯ ನಂಜಯ್ಯನಮಠ ಅವರು ಹೇಳುತ್ತಿದ್ದರು. ನಾನು ದೆಹಲಿಗೆ ಹೋಗುವುದಕ್ಕೆ ಮುಂಚೆ ಮಾನ್ಯ ಬೆಮ್ಮಲ್ಲಪ್ಪನವರು ನನ್ನ ಹತ್ತಿರ ಬಂದು ಆ ಭಾಗದಲ್ಲಿ ಗಡಿಜೀ ಕೇಂದ್ರಗಳನ್ನು ಖಾಸಗೀ ಜನರು ಮುಂದೆ ಬಂದು ತೆರೆದರೆ, ಸರ್ಕಾರದವರು ಸಹ ಸಹಾಯ ಕೊಡುತ್ತಾರೆಯೇ ಎಂದು ಕೇಳಿದರು. ಅದಕ್ಕೆ ನಾನು ಹೇಳಿದೆ, ಖಾಸಗೀ ಜನರು ಮುಂದೆ ನಿಂತು ಮಾಡಿಸಿದರೆ ಸಂತೋಷ, ಅದಕ್ಕೆ ಅರ್ಧ ಭಾಗದ ಖರ್ಚನ್ನು ನಾವು ಕೊಡುತ್ತೇವೆಂದು ಹೇಳಿದೆ, ಆಗಲಿ ಎಂದು ಒಪ್ಪಿ ಅವರು ಹೋದರು. ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಆ ವ್ಯವಹಾರವನ್ನು ಮುಂದುವರೆಸೋಣ ಎಂದು ನಾನು ಅವರಿಗೆ ಹೇಳಿದೆ. ಅಲ್ಲಿಂದೀಚೆಗೆ ಏನಾಯಿತು ಎಂಬುದು ನನಗೆ ಗೊತ್ತಿಲ್ಲ. ಈಗ ಹಠಾತನೆ ಉಪವಾಸ ಮಾಡುವುದಕ್ಕೆ ತೊಡಗಿದ್ದಾರೆ. ಪರೋಕ್ಷ ವಾಗಿ ನಾನು ವಿಚಾರ ತಿಳಿದಿದ್ದರಲ್ಲಿ, ಅವರು ಮಂತ್ರಿಗಳ ಹತ್ತಿರ ಹೋದರೂ ಮಾತನಾಡಿಸಲಿಲ್ಲ. ಚೀಫ್ ಸೆಕ್ರೆಟರಿಯವರ ಹತ್ತಿರ ಹೋದಾಗ ಅವರು ಬಹಳ ಕಾಲದವರೆಗೆ ಕಾಯಿಸಿದರು. ಜಿಲ್ಲಾಧಿಕಾರಿಯವರು ತಮ್ಮ ಮಾತನ್ನು ಕೇಳಲಿಲ್ಲ ರೆವಿನ್ಯೂ ಸೆಕ್ರೆಟರಿಯವರು ಮಾತನಾಡಿಸಲಿಲ್ಲ, ಜಿಲ್ಲಾಧಿಕಾರಿಯವರನ್ನು ವರ್ಗ ಮಾಡಿದರೆ ಎಲ್ಲವೂ ಸರಿಹೋಗುತ್ತದೆ ಎಂದು ಈ ತರಹ ಎಲ್ಲ ಹೇಳುವುದಾದರೆ, ಇದರ ಬಗ್ಗೆ

ಶ್ರೀ ಡಿ. ದೇವರಾಜ ಅರಸ್]

ನಾನು ಈಗ ಏನನ್ನೂ ಹೇಳುವುದಕ್ಕೆ ತಯಾರಿಲ್ಲ. ಸಂಬಂಧಪಟ್ಟವರು ನನ್ನ ಹತ್ತಿರ ಬಂದು ನೇರವಾಗಿ ಏನು ಹೇಳುತ್ತಾರೋ ಅದನ್ನು ತಿಳಿದುಕೊಂಡು ಮಾತನಾಡಬೇಕೇ ಹೊರತು, ಉಹಾಪೋಹದ ಮೇಲೆ ಮಾತನಾಡುವುದು ನನಗೆ ಸಮಂಜಸವಾಗಿ ಕಾಣುವುದಿಲ್ಲ.

ಮಂತ್ರಿ ಶ್ರೀಮಾನ್ ಸುರಪುರ ಮಲ್ಲಪ್ಪನವರು ಬಿಜಾಪುರ ಜಿಲ್ಲೆಯಲ್ಲಿರುವ ಅಧಿಕಾರಿಗಳ ಬಳಿ ಹೋದಾಗ ಅಧಿಕಾರಿಗಳು ಇವರಿಗೆ ಸರಿಯಾಗಿ ಗೌರವ ಕೊಟ್ಟು ನೋಡಿಕೊಳ್ಳಲಿಲ್ಲ ಎಂದು ಗೊತ್ತಾಗಿದೆ ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ಹೇಳುತ್ತಿದ್ದಾರೆ. ನಾನು ಇಲ್ಲಿ ಹೇಳತಕ್ಕದ್ದು ಇಂತಹ ವಿಚಾರಗಳಲ್ಲಿ ಸತ್ಯಾಗ್ರಹ ಮಾಡುತ್ತೇವೆ. ಉಪವಾಸ ಮಾಡುತ್ತೇವೆ ಎಂದು ಮಾಡುವುದರಿಂದ ತಾತ್ವಿಕವಾಗಿ ವೊರಲ್ ಸ್ಟ್ಯಾಂಡರ್ಡ್ ಇರುವುದಿಲ್ಲ ಮತ್ತು ಇದಕ್ಕೆ ಯಾವ ಮೊರಾಲಿಟಿ ಬೇಸಿಸ್ ಇಲ್ಲ. ಈ ರೀತಿ ಮಾಡುವುದರಿಂದ ಏನಾಗುತ್ತದೆ ಎಂದರೆ ಒಂದು ರೀತಿಯಾಗಿ ಕೋಲಿಯರ್ಸ್ ಮಾಡುವುದಕ್ಕಾಗಿ ಮಾಡುತ್ತಾರೆ ಎಂದು ಅರ್ಥವಾಗುತ್ತದೆ. ನಾವು ಈಗಾಗಲೇ ಸಾಕಷ್ಟು ಕೆಲಸಗಳನ್ನು ಮಾಡುತ್ತಿದ್ದೇವೆ. ಈಗತಾಲೇ ಶ್ರೀಮಾನ್ ವಿ. ಎಸ್. ಪಾಟೀಲ್‌ರವರು ಇಲ್ಲಿ ಇಂಥಹ ಕೆಲಸಗಳನ್ನು ಮಾಡಲಿಲ್ಲ, ಇನ್ನೂ ಸಾಕಷ್ಟು ಮಾಡಬೇಕೆಂದು ಒತ್ತಿ ಹೇಳಿದರು. ಹಾಗೆ ನನ್ನಲ್ಲಿ ಒಂದಲ್ಲ ಹತ್ತು ಸಾರಿ ಬಂದರು ತಿಳಿಸಲಿ. ಆಗ ನಾವು ನಮ್ಮ ಕೈಲಾದಷ್ಟು ಕೆಲಸ ಮಾಡೋಣ, ಆವರು ಹೇಳಿದಂತೆ ನಾವು ಸ್ಕೇರ್ಸಿಟಿ ಇರುವ ಭಾಗಗಳಲ್ಲಿನ ಅಧಿಕಾರಿಗಳಿಗೆ ಹೇಳಿ ಅವರು ಮಾಡಿರುವುದು ತಪ್ಪು ಸರಿಯಾಗಿಲ್ಲ ಎಂದು ಅವರಿಗೇ ಹೇಳಿ ಕೆಲಸ ಮಾಡಿಸಲು ಅನುಕೂಲವಾಗುತ್ತದೆ. ನಾವು ನೀವೂ ಇಬ್ಬರೂ ಕಲೆತು ಅಲ್ಲಿಗೆ ಹೋಗಿ ಕೆಲಸಗಳನ್ನು ಮಾಡಿಸೋಣ. ಇದಕ್ಕೆ ಬದಲಾಗಿ ಸತ್ಯಾಗ್ರಹ ಇಲ್ಲವೇ ಉಪವಾಸ ಮಾಡುತ್ತೆವೆಂದು ಹೇಳಿಕೊಂಡು ಮಾಡಿದರೆ ಇದು ಜವಾಬ್ದಾರಿಯುತವಾದ ಕೆಲಸ ಮಾಡಿದಂತಾಗುವುದಿಲ್ಲ. ನಾನು ಈ ಸಭೆಯಲ್ಲಿರುವ ಈ ಭಾಗಕ್ಕೆ ಸಂಬಂಧಪಟ್ಟ ಎಲ್ಲ ಮಾನ್ಯ ಸದಸ್ಯರಲ್ಲೂ ಹೇಳುವುದು ಅವರು ಹೇಳುವ ಎಲ್ಲ ವಿಚಾರಗಳನ್ನೂ ನೋಡುತ್ತೇವೆ ಎಂದು ಆಗಲೇ ಭರವಸೆ ಕೊಟ್ಟಿದ್ದೇವೆ ಇನ್ನು ಆಪ್ಪರ್ ಕೃಷ್ಣಾ ಪ್ರಾಜೆಕ್ಟ್ ಮಾಡಬೇಕೆಂದು ಇದರ ಕೆಲಸಗಳನ್ನು ಕೈಗೆ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಲಾಗಿದೆ. ಆದರೆ ಇದರ ಕೆಲಸಗಳನ್ನು ಆರಂಭ ಮಾಡುವುದಕ್ಕೆ ಎಂಬಂಚೆ ಕೆಲವು ಕಷ್ಟಗಳು ಬಂದವು. ಅವುಗಳನ್ನೆಲ್ಲಾ ಈಗ ಪರಿಹರಿಸಲಾಗಿದೆ ಮಂತ್ರಿ ಅದನ್ನು ಬೇಗನೆ ಈಗ ಆರಂಭಮಾಡುತ್ತೇವೆ.

ಶ್ರೀ. ಸಿ. ಬೈರೇಗೌಡ (ವೆಮಗಲ್) —ಶ್ರೀ ಮಲ್ಲಪ್ಪನವರು ಉಪವಾಸ ಮಾಡುತ್ತಿರುವ ಜಾಗಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ವಿರೋಧ ಪಕ್ಷದ ನಾಯಕರು ಹೋಗಿ ಅವರಿಗೆ ಇದರ ಬಗ್ಗೆ ಮಂತ್ರಿ ತಿಳಿಸಿ ಹೀಗೆ ಉಪವಾಸ ಮಾಡಬಾರದು ಎಂದು ಅವರ ಮನವೊಲಿಸಿ ಅವರು ಮಾಡುತ್ತಿರುವ ಉಪವಾಸವನ್ನು ತಡೆಯಲು ಯತ್ನಮಾಡಬೇಕೆಂದು ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ ದೇವರಾಜಅರಸ್.-ನಾನು ಈ ಸಭೆಯ ಮೂಲಕ ಅವರು ಮಾಡತಕ್ಕದ್ದು ಸರಿಯಲ್ಲ ಎಂದು ಆಗಲೇ ಹೇಳಿದ್ದೇನೆ, ಉಪವಾಸವನ್ನು ನಿಲ್ಲಿಸಿ ಎಂದೂ ತಿಳಿಸಲಾಗಿದೆ. ಇದಕ್ಕಿಂತ ಹೆಚ್ಚಾಗಿ ನಾನೇನೂ ಹೇಳುವುದಕ್ಕಾಗುವುದಿಲ್ಲ.

ಶ್ರೀ ಪಿ. ಎಂ. ಭಂಗಿ (ಜಮಖಂಡಿ). ಮುಖ್ಯ ಮಂತ್ರಿಗಳು ಇಲ್ಲಿ ಹೇಳುವಂತೆ ಮಾನ್ಯ ಮಲ್ಲಪ್ಪನವರನ್ನು ಬಿಜಾಪುರ ಜಿಲ್ಲಾಧಿಕಾರಿಗಳು ಸರಿಯಾಗಿ ನೋಡಿಕೊಳ್ಳಲಿಲ್ಲ ಏನ್ನುವುದಕ್ಕಾಗಿ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆಂದು ಭಾವಿಸಿದಂತೆ ಕಾಣುತ್ತೆ. ಆದರೆ ನಾನು ಹಾಗೂ ನಮ್ಮ ಭಾಗಕ್ಕೆಸೇರಿದ ಐದು ಜನ ಶಾಸಕರು ಕೂಡ ಶ್ರೀಮಾನ್ ಮಲ್ಲಪ್ಪನವರನ್ನು ನೋಡಿ ಅವರು ಖಂಡಿತ ಉಪವಾಸ ನಿಲ್ಲಿಸಬೇಕೆಂದು ಕೇಳಿದರೂ ಅವರು ಒಪ್ಪಲಿಲ್ಲ. ಅವರು ನಮ್ಮ ಊರಿನ ಜನ ಮೊದಲು ಸಾಯುವುದಕ್ಕಿಂತ ಮುಂಚೆ ನಾನು ಸತ್ತರೆ ನಮ್ಮ ಜನಕ್ಕೆ ಸಂತೋಷವಾಗುತ್ತದೆ ಎಂದು ಹೇಳಿದರು ಇದಕ್ಕೆ ಕಾರಣ ಇಲ್ಲಿನ ಜನರ ಸಂಕಷ್ಟಗಳು ಬಹು ಉಗ್ರ ರೀತಿಯಲ್ಲಿದೆ. ಇವರ ಸ್ಥಿತಿಯನ್ನು ಉತಮ ಮಾಡಬೇಕೆಂದು ಅಲ್ಲಿರುವ ಅಧಿಕಾರಿಗಳ ಕಡೆಗೆ ಹೇಳಿದರೆ ನಮ್ಮಂಥಹ ಎಂ. ಎಲ್ ಎ. ಗಳ ಮೇಲೇನೇ ಚಾರ್ಜ್‌ಶೀಟು ಹಾಕಂತ್ತೆವೆಂದು ಹೇಳಿದರೆ ಅಧಿಕಾರಿಗಳ ಬಗ್ಗೆ ನಾವೇನು ಹೇಳುವುದು ? ಇದನ್ನು ಮಾನವೀಯ ದೃಷ್ಟಿಯಿಂದ ನೋಡಬೇಕು. ಇದರಲ್ಲಿ ರಾಜಕೀಯ ಮಾಡಲು ಯಾರೂ ತರುತ್ತಿಲ್ಲ. ಇದಕ್ಕಾಗಿ ಎಲ್ಲ ಮಂತ್ರಿಗಳು ಹಾಗೂ ಈ ಸದನದ ಎಲ್ಲ ಸದಸ್ಯರೂ ಮಾನ್ಯ ಸುರಪುರ ಮಲ್ಲಪ್ಪನವರು ಇರುವ ಕಡೆಗೆ ಹೋಗಿ ಅವರ ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಲು ಪ್ರಯತ್ನ ಮಾಡಬೇಕೆಂದು ನನ ಅಭಿಪ್ರಾಯ.

Sri H. D. Devegowda.—I am equally interested in it. I want to know who is that officer who has misbehaved with the member.

ಶ್ರೀ ಡಿ. ದೇವರಾಜ ಅರಸ್.—ಶ್ರೀಮಾನ್ ಭಂಗಿಯವರು ಹೇಳಿದಂತೆ ಯಾವುದೋ ಒಂದು ಊರಿನಲ್ಲಿ ಕೆಲಸ ಮಾಡಿದರು ಕೂಲಿಗಳಿಗೆ ದುಡ್ಡು ಸಿಗಲಿಲ್ಲವಂತೆ ಎಂದು ಅಧಿಕಾರಿಗಳಿಗೆ ಹೇಳಿದಾಗ ಅಲ್ಲಿ ಮಾಡಬೇಕಾದ ಕೆಲಸ ಮಣ್ಣು ಗುಡ್ಡೆ ಮಾಡುವುದು ಎಂದು ಕಾಣುತ್ತೆ. ಅದನ್ನು ಮಾಡುವಾಗ ಯಾವ ರೀತಿ ಅಧಿಕಾರಿಗಳು ಸೂಚನೆ ಕೊಟ್ಟಿದ್ದರೋ ಅದರಂತೆ ಕಟ್ಟಿದೆ ಅದಕ್ಕಿಂತ ಹೆಚ್ಚಾಗಿ ಎತ್ತರ ಮಾಡಿ ಕಟ್ಟಿದ್ದರಂತೆ. ಇದು ಸರಿಯಾಗಿಲ್ಲ ಇದನ್ನು ಸರಿಮಾಡದೆ ಇದ್ದರೆ ಕೂಲಿ ಕೊಡಲಾಗುವುದಿಲ್ಲ ಎಂದು ಸೂಚನೆ ಅಧಿಕಾರಿಗಳು ಕೊಟ್ಟಿರಬಹುದು. ಇದರ ಬಗ್ಗೆ ನನ್ನ ಬಳಿ ಮಾನ್ಯ ಸದಸ್ಯರಾದ ಶ್ರೀ ಮಲ್ಲಪ್ಪನವರು ಬಂದಾಗ ನನಗೆ ತಿಳಿಸಲಿಲ್ಲ. ನನಗೆ ಇತ್ತೀಚೆಗೆ ಗೊತ್ತಾಗಿರುವ ವಿಚಾರ ಮತ್ತು ಇದು ನಿನ್ನೆ ನಾನು ಬಂದ ಕೂಡಲೇ ಇದರ ವಿಚಾರವೆಲ್ಲಾ ತಿಳಿಯಿತು. ಇದು ಹೇಗಿದೆ ಎಂದರೆ ಕೆಲವರಿಗೆ ಕತ್ತಲಲ್ಲಿ ಹುತ್ತದ ಬಳಿ ಹೋದಾಗ ಅಲ್ಲಿ ಒಂದು ಹಗ್ಗ ಇದ್ದರೆ ಅದನ್ನು ಹಾವು ಎಂತಲೋ ಏನೋ ಎನ್ನುವಂತೆ ಭಾಸವಾಗುವಂತೆ ಇಲ್ಲಿ ಆಗಿದೆ. ಯಾವುದಾದರು ಒಂದು ಸ್ಥಳಕ್ಕೆ ಹೋಗಿ ಅಧಿಕಾರಿಗಳು ಅಲ್ಲಿ ಕೂಲಿಗಳಿಂದ ಕೆಲಸ ಮಾಡಬೇಕಾದರೆ ಅದು ಸರಿಯಾಗಿದೆಯೋ ಇಲ್ಲವೋ ಅದನ್ನು ನೋಡಿ ದುಡ್ಡು ಕೊಡಬೇಕಾಗುತ್ತದೆ. ಇದನ್ನು ಸರಿಯಾಗಿ ನೋಡದೆ ಹಣ ಕೊಡುವುದಕ್ಕೆ ಬರುವುದಿಲ್ಲ. ದುಡ್ಡನ್ನು ಅಧಿಕಾರಿಗಳು ಕೊಡಬೇಕಾದರೆ ಸರಿಯಾಗಿ ಯೋಚನೆ ಮಾಡಿ ಕೊಡಬೇಕಾಗುತ್ತದೆ. ಸುಮ್ಮನೆ ದುಡ್ಡು ಕೊಡಲಿಕ್ಕೆ ಆಗುವುದಿಲ್ಲ. ಅಲ್ಲದೆ ಕೂಲಿ ಕೆಲಸಗಳನ್ನು ಸರಿಯಾಗಿ ಮಾಡದೆ ಇದ್ದಾಗ ಅಲ್ಲಿಂದ ಮೊದಲು ತಂದ ಮಣ್ಣನ್ನು ಮತ್ತೆ ತೆಗೆದುಕೊಂಡು ಹೋಗಲು ಸಾಧ್ಯವಿಲ್ಲ ಎಂದು ಹೇಳಿದರೂ ಅದನ್ನು ಒತ್ತಾಯದಿಂದ ತೆಗೆದುಕೊಂಡು ಹೋಗಬೇಕೆಂದರೆ ಆಗ ಅವರ ಮೇಲೆ ಕೇಸು ಮಾಡಬೇಕಾಗಿ ಬರುತ್ತದೆ. ಇದನ್ನೆಲ್ಲ ಸ್ಥಳದಲ್ಲಿರುವ ಎಂ.ಎಲ್.ಎ. ಗಳಾದರೂ ಸ್ವಲ್ಪ ಯೋಚನೆ ಮಾಡಿ ಮಾಡಬೇಕಾಗುತ್ತದೆ. ಇದನ್ನು ಹೇಗೆ ಆಗಿದೆ ಎಂದು ನನಗೆ ಹೇಳುವುದು ಕಷ್ಟವಾಗುತ್ತದೆ. ಸರಕಾರದವರು ಕೆಲಸ ಕಾರ್ಯಗಳನ್ನು ನಡೆಸಬೇಕು ಎಂದು ಹೇಳುವುದು ಸರಿ, ಇದರಲ್ಲಿ ನಿಮ್ಮ ಜವಾಬುದಾರಿಯೂ ಇರಬೇಕು, ಕೆಲಸಗಳು ಸರಿಯಾಗಿಲ್ಲದೆ ಹೋದರೆ ಅದನ್ನು ತಾವುಗಳು ಸರಕಾರದ ಗಮನಕ್ಕೆ ತಂದಾಗ ಅದರ ನ್ಯಾಯಾನ್ಯಾಯಗಳನ್ನು ವಿಮರ್ಶೆ ಮಾಡಿ ಮಾಡಬೇಕಾಗುತ್ತದೆ. ಸುಮ್ಮ ಸುಮ್ಮನೆ ಹಣ ಕೊಡಿ ಎಂದರೆ ಅದನ್ನು ಹೇಗೆ ಕೊಡುವುದು ?

ಶ್ರೀ ಜಿ. ಪಿ. ನಂಜಯ್ಯನವರು .—ಮಾನ್ಯ ಮಂಖ್ಯಿ ಮಂತ್ರಿಗಳು ಸಹಕಾರ ಕೊಡಬೇಕು ಎಂದು ಹೇಳಿರುವಂತೆ ನಮ್ಮ ಭಾಗದ ಎಲ್ಲ ಸದಸ್ಯರುಗಳೂ ಇಂತಹ ಬರಗಾಲದ ಸ್ಥಿತಿಯಲ್ಲಿ ಸಹಕಾರದಿಂದ ಕೆಲಸ ಮಾಡುತ್ತಿದ್ದೇವೆ. ಆದರೆ ಒಬ್ಬರು ಎಂ.ಎಲ್.ಎ. ಆದವರು ಡಿ.ಸಿ. ಕಡೆಗೆ ಹೋಗಿ ಇಲ್ಲಿ ಕೆಲಸ ಮಾಡುವುದು ಅವಶ್ಯ ಇದೆ ಎಂದು ಹೇಳದೆ ಹೋದರೆ ಅವರಿಗೆ ಸಾಕಷ್ಟು ಗೌರವ ಕೂಡ ಕೊಡದೆ ವರ್ತಿಸಿದರೆ ನಮ್ಮ ಅಸೆಂಬ್ಲಿ ಮೆಂಬರುಗಳಿಗೆ ಯಾವ ರೀತಿ ಮರ್ಯಾದೆ ಬರುತ್ತದೆ ? ಇದನ್ನು ತಾವು ವಿಚಾರ ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀ ಮಲ್ಲಪ್ಪನವರು ಇಂಡಿ ತಾಲ್ಲೂಕಿನಲ್ಲಾಗಿರುವ ದಳ್ಳುರಿಯನ್ನು ನೋಡಿದರೆ ಅಲ್ಲಿ ಸಾವಿರಾರು ದನಗಳು ಸಾಯುತ್ತಿವೆ, ಇಲ್ಲಿಗೆ ಖರ್ಚು ಮಾಡಿರುವುದು ಸಾಕಾದಷ್ಟು ಇಲ್ಲ ಮತ್ತು ಇಲ್ಲಿಂದ ದನಗಳನ್ನು ಬೇರೆ ಕಡೆಗಳಿಗೆ ಜನ ಸಾಗಿಸುತ್ತಿದ್ದಾರೆ ಎಂದು ಇದನ್ನು ಅಲ್ಲಿನ ಅಧಿಕಾರಿಗಳ ಗಮನಕ್ಕೆ ತರಲು ಹೋದರೆ ಅವರು ಕೋಪ ಮಾಡಿಕೊಂಡರೆ ಇಂತಹ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವೇ ? ಇದೂ ಅಲ್ಲದೆ ಮಾನ್ಯ ಕಂದಾಯ ಮಂತ್ರಿಗಳ ಕಡೆಗೆ ಮಾನ್ಯ ಸದಸ್ಯರು ಬಂದು ಅವರ ಕಾಲು ಮುಟ್ಟಿ ಇದರ ಬಗ್ಗೆ ಹೇಳಿದರೂ ಅವರು ಮನಸ್ಸಿಗೆ ತೆಗೆದುಕೊಳ್ಳದೇ ಹೋದರೆ ಏನು ಮಾಡುವುದು ? ಇದರ ಬಗ್ಗೆ ಯಾರು ಹೇಳಿದರೂ ನಾನು ಒಪ್ಪುವುದಿಲ್ಲ ಎಂದು ಅವರು ಹೇಳುತ್ತಾರೆ. ಇದಕ್ಕಾಗಿ ನಾವೂ ಕೂಡ ಆ ಭಾಗದ ಕಡೆಯವರೇ ಆಗಿರುವುದರಿಂದ ಮತ್ತು ಸರಕಾರದ ಪಕ್ಷದವರೇ ಆಗಿದ್ದರೂ ಇದನ್ನು ಮಾನವೀಯ ದೃಷ್ಟಿಯಿಂದ ನೋಡಬೇಕು. ಇದಕ್ಕಾಗಿ ನಾನು ಮಾನ್ಯ ಮಂಖ್ಯಿ ಮಂತ್ರಿಗಳಲ್ಲಿ ಕೇಳುವುದು ಇದನ್ನು ತೀವ್ರವಾಗಿ ಪರಿಹರಿಸಬೇಕು ಮತ್ತು ಡಾಕ್ಟರುಗಳು ಕೂಡ ಇವರನ್ನು ಬಂದು ನೋಡಿ ಇವರು ತೀರಾ ಅಶಕ್ತರಾಗಿದ್ದಾರೆ. ಇವರ ಪ್ರಾಣವನ್ನು ಉಳಿಸಲು ಸರಿಯಾದ ಒಂದು ಮಾರ್ಗ ಹುಡುಕಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ದೇವರಾಜ ಅರಸ್.— ತಾವುಗಳೆಲ್ಲಾ ಹೋಗಿ ಅವರಿಗೆ ಹೇಳಬಹುದು. ಶ್ರೀ ಮಲ್ಲಪ್ಪನವರು ನನ್ನ ಬಳಿ ಬಂದಾಗ ಗಂಜಿ ಕೇಂದ್ರಗಳನ್ನು ತೆರೆಯಬೇಕೆಂದು ಸಲಹೆ ಮಾಡಿದರು. ಇದಕ್ಕೆ ಸರಕಾರ ಒಪ್ಪಿತು. ಇದರಂತೆ ಅವರೂ ಕೂಡ ಅರ್ಧದಷ್ಟು ಖರ್ಚನ್ನೂ ಖಾಸಗಿಯವರಿಂದ ವಸೂಲು ಮಾಡಿದರೆ ಸರಕಾರವೂ ಅರ್ಧ ಖರ್ಚು ಕೊಡುತ್ತದೆ ಎಂದು ಹೇಳಿದ್ದೆವು. ಅದೂ ಅಲ್ಲದೆ ಅವರು ಸರಿಯಾಗಿ ಕೆಲಸಗಳು ನಡೆಯುತ್ತಿಲ್ಲ ಎಂದೂ ಹೇಳಿದರು. ಮತ್ತು ಕೆಲವು ಕಡೆ ನಡೆದಿರುವ ಕೆಲಸಗಳಿಗೆ ದುಡ್ಡು ಕೊಟ್ಟಿಲ್ಲ ಎಂದೂ ಹೇಳಿದರು. ಇದರ ಬಗ್ಗೆ ಈಗಾಗಲೇ

ಶ್ರೀ ಡಿ. ದೇವರಾಜ್ ಅರಸ್]

ಸರಕಾರದ ಕಡೆಯಿಂದ ಸೂಚನೆಗಳನ್ನು ಕೊಟ್ಟು ಈ ಕೆಲಸಗಳನ್ನು ಮಾಡುತ್ತಿದ್ದಾರೆ, ಅವರಿಗೆ ಇದಕ್ಕಾಗಿ ನೀವು ಸತ್ಯಾಗ್ರಹ ಇಲ್ಲವೇ ಉಪವಾಸ ಮಾಡುವುದು ವಿಹಿತವಲ್ಲ ಎಂದು ತಾವೆಲ್ಲರೂ ಹೇಳಿ ಅವರನ್ನು ಒಪ್ಪಿಸಬಹುದು.

Arrest and Release of a Member—Announcement

MADAM SPEAKER:—I have received a communication from the Superintendent of Police, Mysore City that Sri Vatal Nagaraj, a member of the House, was arrested at 11.00 a.m. today *i.e.* 11th December under Section 151 of Cr.P.C. and that he will be released in due course when the situation returns to normalcy.

REQUESTING SRI M. K. SURPUR TO BREAK HIS FAST.

2-30 P.M.

ಶ್ರೀ ಬಾಪೂಗೌಡ ರಾಯಪ್ಪ.— ಈ ಸಭೆಯ ಒಬ್ಬ ಸದಸ್ಯರು ಉಪವಾಸ ಕೈಕೊಂಡಿದ್ದಾರೆ. ಅವರ ಉಪವಾಸದಿಂದ ಮುಂದೆ ಆಗತಕ್ಕ ಗಂಡಾಂತರವನ್ನು ತಪ್ಪಿಸಬೇಕು. ಒಂದು ವೇಳೆ ಅಂಥ ಗಂಡಾಂತರ ಉಂಟಾದರೆ ಈ ಸದನಕ್ಕೆ ಗೌರವ ಬರುವುದಿಲ್ಲ. ಅವರು ಎರಡು ದಿವಸಗಳಿಂದ ಉಪವಾಸ ಮಾಡುತ್ತಿದ್ದಾರೆ. ಅವರು ಸೀರಿಯಸ್ ಕಂಡೀಷನ್‌ನಲ್ಲಿದ್ದಾರೆಂದು ಗೊತ್ತಾಗಿದೆ. ಒಂದು ವೇಳೆ ಅವರು ಸತ್ತರೆ ಈ ಮನೆಗೆ ಅಪವಾದ ಬಂದೀತು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯ ಪರವಾಗಿ ಅವರು ಉಪವಾಸವನ್ನು ಕೈಬಿಡುವಂತೆ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜಿ. ಪಿ. ನಂಜಯ್ಯನಮಠ .— ಮಾನ್ಯ ಸದಸ್ಯರು ಹೇಳಿದುದನ್ನು ನಾನು ಅನುಮೋದನೆ ಮಾಡುತ್ತೇನೆ.

ಶ್ರೀ ಜಿ. ಎನ್. ಪಾಟೀಲ್.— ನಮ್ಮ ಸಭೆಯ ಸದಸ್ಯರೊಬ್ಬರು ಉಪವಾಸ ಮಾಡುತ್ತಿರುವಾಗ ನಾವು ಸುಮ್ಮನೆ ಕುಳಿತುಕೊಳ್ಳಬೇಕು ಎಂದರೆ ಹಾಗೆ ಮಾಡಲು ಸಾಧ್ಯವಿಲ್ಲ. ನಾವು ಸಭೆಯಲ್ಲಿ ಧರಣಿ ಸತ್ಯಾಗ್ರಹ ಮಾಡಿದಾಗ ಕೊಟ್ಟಂಥ ಆಶ್ವಾಸನೆಯನ್ನು ಇನ್ನೂ ಈಡೇರಿಸಿಲ್ಲ.

ಅಧ್ಯಕ್ಷರು.— ಎಲ್ಲರಿಗೂ ಗೊತ್ತಿರುವ ಹಾಗೆ ಒಬ್ಬ ಮಾನ್ಯ ಸದಸ್ಯರನ್ನು ಆ ಭಾಗಕ್ಕೆ ಕಳುಹಿಸ ಲಾಗಿದೆ.

ಶ್ರೀ ಜಿ. ಎನ್. ಪಾಟೀಲ್.— ಮಾನ್ಯ ಸದಸ್ಯರಲ್ಲಿ ತಮ್ಮ ಮುಖೇನ ನನ್ನದು ಒಂದು ವಿನಂತಿ ಇದೆ. ನಿನ್ನೆ ದಿವಸ ನಾವು ಕೆಲವೊಂದು ಸಂಬಂಧಪಟ್ಟ ಮಂತ್ರಿಗಳನ್ನು ಕರೆತು ಮಾತನಾಡಿ ಒಂದು ವೀಟಿಂಗ್ ಕರೆದು ಪರಿಹಾರವನ್ನು ಕೈಕೊಳ್ಳಬೇಕೆಂದು ಹೇಳಿದ್ದೇವೆ. ಅದರ ಬಗ್ಗೆ ಅವರು ಏನು ಮಾಡುತ್ತಾರೆನ್ನುವುದನ್ನು ದಯಮಾಡಿ ತಿಳಿಸಬೇಕು.

ಅಧ್ಯಕ್ಷರು.— ನಿಮ್ಮ ನಿಮ್ಮಲ್ಲಿ ಚರ್ಚೆಯಾಗಿರಬಹುದಾದ ವಿಚಾರಗಳನ್ನು ಇಲ್ಲಿ ಹೇಳುವುದಕ್ಕೆ ಬರುವುದಿಲ್ಲ. ನನಗೆ ನೋಟೀಸ್ ಕೊಟ್ಟರೆ ಅದನ್ನು ಸರ್ಕಾರಕ್ಕೆ ಕಳುಹಿಸುತ್ತೇನೆ. ನಾವು ಕೆಲವು ನಿಯಮಗಳ ಪ್ರಕಾರ ಕೆಲಸ ಮಾಡಬೇಕಾಗಿದೆ.

ಶ್ರೀ ಬಾಪೂಗೌಡ ರಾಯಪ್ಪ:— ಶ್ರೀ ಸಂಗಪುರ ಮಲ್ಲಪ್ಪನವರು ಬಹಳ ಸೀರಿಯಸ್ ಆಗಿದ್ದಾರೆ, ಅದರ ಬಗ್ಗೆ ಏನಾದರೂ ಮೊದಲು ಮಾಡಬೇಕು.